# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 777 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಗೋವಿಂದರಾಜು (ವಿಧಾನ ಸಭಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 13.03.2025 |
| ಉತ್ತರಿಸುವ ಸಚಿವರು. | : | ಗೃಹ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕಳೆದ 5 ವರ್ಷದಿಂದ ಇಲ್ಲಿಯವರೆಗೂ ರಾಜ್ಯದಲ್ಲಿ ಸ್ತ್ರೀಯರ ಮೇಲೆ ನಡೆದಿರುವ ದೌರ್ಜನ್ಯ ಪ್ರಕರಣಗಳ ಸಂಖ್ಯೆಯೆಷ್ಟು; (ಲೈಂಗಿಕ ಕಿರುಕುಳ, ಅತ್ಯಾಚಾರ, ವರದಕ್ಷಿಣೆ ಕಿರುಕುಳ ಸಾವು ಹಾಗೂ ಫೋಕ್ಸೋ ಪ್ರಕರಣಗಳ ಸಂಖ್ಯೆಯನ್ನು ಪ್ರತ್ಯೇಕವಾಗಿ ಮಾಹಿತಿ ಒದಗಿಸುವುದು)</td><td>ರಾಜ್ಯದಲ್ಲಿ ಮಹಿಳೆಯರ ಮೇಲೆ ನಡೆದ ದೌರ್ಜನ್ಯಗಳಿಗೆ ಸಂಬಂಧಿಸಿದಂತೆ ದಾಖಲಿಸಿರುವ ಪ್ರಕರಣಗಳ ಸಂಖ್ಯೆ ಈ ಕೆಳಗಿನಂತಿರುತ್ತದೆ:–
<table>
<tr><th>ವರ್ಷ</th><th>2020</th><th>2021</th><th>2022</th><th>2023</th><th>2024</th><th>2025<br>20.02.2025</th></tr>
<tr><td>ಲೈಂಗಿಕ ಕಿರುಕುಳ</td><td>4547</td><td>4917</td><td>5858</td><td>6492</td><td>6326</td><td>799</td></tr>
<tr><td>ಅತ್ಯಾಚಾರ</td><td>479</td><td>556</td><td>537</td><td>601</td><td>736</td><td>124</td></tr>
<tr><td>ವರದಕ್ಷಣೆ ಸಾವು</td><td>176</td><td>157</td><td>161</td><td>158</td><td>112</td><td>19</td></tr>
<tr><td>ಪೋಕ್ಸೋ</td><td>2165</td><td>2884</td><td>3209</td><td>3898</td><td>4019</td><td>594</td></tr>
</table></td></tr>
<tr><td>ಆ</td><td>ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರಿಗೆ ಸುರಕ್ಷತೆ ಕಲ್ಪಿಸುವ ಉದ್ದೇಶದಿಂದ ಸೇಫ್ ಸಿಟಿ ಯೋಜನೆ ಅನುಷ್ಠಾನಗೊಂಡಿದ್ದು, ಈ ಯೋಜನೆಯಡಿಯಲ್ಲಿ ಯಾವ ಯಾವ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿದೆ; ಹಾಗೂ ಈ ಯೋಜನೆಯು ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ<br>ಜಾರಿಗೊಳಿಸಲಾಗಿದೆ;</td><td>• ಸೇಫ್ ಸಿಟಿ ಯೋಜನೆ ಅಡಿಯಲ್ಲಿ ರಾಜ್ಯದಲ್ಲಿ 1050 ಮಹಿಳಾ ಸಹಾಯ ಕೇಂದ್ರಗಳು (Woman helpdesk) ಹಾಗೂ 35 ಮಹಿಳಾ ಪೊಲೀಸ್ ಠಾಣೆಗಳಿದ್ದು, ಸದರಿ ಮಹಿಳಾ ಪೊಲೀಸ್ ಠಾಣೆಗಳು (Anti Human Trafficking Unit) AHTU ಘಟಕಗಳಾಗಿಯು ಸಹ ಕಾರ್ಯನಿರ್ವಹಿಸುತ್ತಿದೆ.<br>• ಬೆಂಗಳೂರು ನಗರದಲ್ಲಿ ಸೇಫ್ ಸಿಟಿ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗಿದ್ದು, ಈ ಯೋಜನೆಯ ಅಡಿಯಲ್ಲಿ ಬೆಂಗಳೂರು ನಗರದ ಸಾರ್ವಜನಿಕರ ಹಿತದೃಷ್ಟಿ ಸುರಕ್ಷತೆಗೆ ಹಾಗೂ ದೌರ್ಜನ್ಯಕ್ಕೊಳಗಾದ ಮಹಿಳೆ ಮತ್ತು ಮಕ್ಕಳ ಸಂರಕ್ಷಣೆಗೆ ಬೇಕಾದ ಅಗತ್ಯ ಪೊಲೀಸ್, ವೈಧ್ಯಕೀಯ ಹಾಗೂ ಕಾನೂನು ನೆರವುಗಳನ್ನು ಒದಗಿಸುವ ನಿಟ್ಟಿನಲ್ಲಿ ತಾಂತ್ರಿಕ ವಿಧಾನಗಳನ್ನು ಬಳಸಿಕೊಂಡು ಶೀಘ್ರ ಮತ್ತು ಸುಧಾರಿತ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಈ ಯೋಜನೆಯ ಭಾಗವಾಗಿ ನಗರದಾದ್ಯಂತ ಆಯಕಟ್ಟಿನ ಆಯ್ದ ಭಾಗಗಳ ಸ್ಥಳಗಳನ್ನು ಗುರುತಿಸಿ ಹೆಚ್ಚಿನ ಸಾಮರ್ಥ್ಯದ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಿ, ಅದರಿಂದ ದೊರಕುವ ಸಿಸಿಟಿವಿ ದೃಶ್ಯಾವಳಿಗಳ ನಿರ್ವಹಣೆ ಹಾಗೂ ವೀಕ್ಷಣೆಗೆ ಅತ್ಯಾಧುನಿಕ ಹಾಗೂ ಸುಸಜ್ಜಿತವಾದ ಕಮಾಂಡ್ ಸೆಂಟರ್ ಅನ್ನು ಅನುಷ್ಠಾನ ಗೊಳಿಸಲಾಗಿರುತ್ತದೆ.<br>• ರಾಜ್ಯದಲ್ಲಿ 112 (ಇ.ಆರ್.ಎಸ್.ಎಸ್.) ಸಹಾಯ ವಾಣಿಯ ಮೂಲಕ ಹೊಯ್ಸಳ ಗಸ್ತು ವಾಹನಗಳನ್ನು ಸಮರ್ಪಕವಾಗಿ ನಿಯೋಜಿಸಿ ಸಾರ್ವಜನಿಕರ ಕರೆಗಳಿಗೆ ತುರ್ತಾಗಿ ಸ್ಪಂದಿಸಲಾಗುತ್ತಿದೆ. ಈ ಸೇಫ್‌ಸಿಟಿ</td></tr>
</table>

ಯೋಜನೆಯಿಂದ ಬೆಂಗಳೂರು ನಗರ ಪೊಲೀಸ್ ವ್ಯವಸ್ಥೆಯಲ್ಲಿ ಮತ್ತು ಕಾರ್ಯವೈಖರಿಯಲ್ಲಿ ಅಮೂಲಾಗ್ರ ಬದಲಾವಣೆ ಮತ್ತು ಸುಧಾರಣೆಯನ್ನು ತರಲಾಗಿದ್ದು, ಸಾರ್ವಜನಿಕ ಸೇವೆಯನ್ನು ತಾಂತ್ರಿಕತೆಯ ಮೂಲಕ ಮೆರಗು ನೀಡಲಾಗಿದೆ.

- ನಿರ್ಭಯ ಕೇಂದ್ರ (Integrated Support Centre for Women & Children) ಇಲ್ಲಿ ಶೋಷಣೆಗೊಳಗಾದ ಮಹಿಳೆ ಮತ್ತು ಮಕ್ಕಳಿಗೆ ಒಂದೇ ಸೂರಿನಡಿಯಲ್ಲಿ ವೈದ್ಯಕೀಯ ಚಿಕಿತ್ಸೆ, ಆಪ್ತ ಸಮಾಲೋಚನೆ, ಕಾನೂನು ನೆರವು, ವಿಡಿಯೋ ಕಾನ್‌ಫೆರೆನ್ಸ್ ಮೂಲಕ ಕಲಂ, 164 ಸಿಆರ್‌ಪಿಸಿ ಅಡಿಯಲ್ಲಿ ಮಾನ್ಯ ನ್ಯಾಯಾಧೀಶರ ಮುಂದೆ ನೀಡುವ ಹೇಳಿಕೆಯನ್ನು ರೆಕಾರ್ಡ್ ಮಾಡುವ ಸೇವೆ, ಇತ್ಯಾದಿ ಸೇವೆಗಳನ್ನು ಒದಗಿಸುವುದು ಇದರ ಉದ್ದೇಶವಾಗಿದೆ.
- ಶೋಷಣೆಗೊಳಗಾದ ಮಹಿಳೆಯರಿಗೆ ಆಪ್ತ ಸಮಾಲೋಚನೆಯೊಂದಿಗೆ ಪ್ರಥಮ ವೈದ್ಯಕೀಯ ಚಿಕಿತ್ಸೆ ಒದಗಿಸುವ ಉದ್ದೇಶದಿಂದ ನಗರದ 08 ಪ್ರಮುಖ ಸರ್ಕಾರಿ ಆಸ್ಪತ್ರೆಗಳಾದ ಬೌರಿಂಗ್, ವಾಣಿವಿಲಾಸ, ವಿಕ್ಟೋರಿಯಾ, ಕೆ.ಸಿಜನರಲ್, ಸಿ.ವಿ. ರಾಮನ್‌ಜನರಲ್, ಜಯನಗರ ಜನರಲ್, ಇಎಸ್‌ಐ ರಾಜಾಜಿನಗರ ಹಾಗೂ ಯಲಹಂಕ ಜನರಲ್ ಆಸ್ಪತ್ರೆಗಳಲ್ಲಿ ಸಿ.ಸಿ.ಆರ್.ಯು (Critical Care Response Unit) ತೆರೆಯಲಾಗಿದೆ.
- 08 ಪೊರೆನ್ಸಿಕ್ ವಾಹನಗಳನ್ನು ಖರೀದಿಸಲಾಗಿದ್ದು, ಅಪರಾಧ ಕೃತ್ಯ ನಡೆದ ಸ್ಥಳಗಳಿಗೆ ಸದರಿ ಫೊರೆನ್ಸಿಕ್ ವಾಹನಗಳು ತಜ್ಞರೊಂದಿಗೆ ಕೂಡಲೇ ತಲುಪಿ ಸಾಕ್ಷಿಯ ಸಂಗ್ರಹಣೆ ಮಾಡಿ ತಜ್ಞರ ಅಭಿಪ್ರಾಯ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ತಲುಪಿಸಲು ಸಹಕಾರಿಯಾಗುತ್ತದೆ.
- ನಗರದ ಮಹಿಳಾ ಪೊಲೀಸ್ ಸಿಬ್ಬಂದಿಗಳಿಗೆ ರಾಣಿ ಚನ್ನಮ್ಮ ಪಡೆಯನ್ನು ರಚಿಸಲಾಗಿದ್ದು, ಸದರಿ ಪಡೆಯಲ್ಲಿನ ಮಹಿಳಾ ಪೊಲೀಸ್ ಸಿಬ್ಬಂದಿಗಳಿಗೆ "ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ" ವತಿಯಿಂದ ಸ್ವರಕ್ಷಣಾ ತರಬೇತಿಯನ್ನು ನೀಡಲಾಗುತ್ತಿದ್ದು, ತರಬೇತಿ ಪಡೆದ ಮಹಿಳಾ ಪೊಲೀಸ್ ಸಿಬ್ಬಂದಿಗಳು ನಗರದ ಶಾಲೆ ಮತ್ತು ಕಾಲೇಜುಗಳಲ್ಲಿನ ವಿದ್ಯಾರ್ಥಿನಿಯರಿಗೆ ಸ್ವರಕ್ಷಣಾ ತರಬೇತಿ ನೀಡುತ್ತಾರೆ ಮತ್ತು ಠಾಣಾ ವ್ಯಾಪ್ತಿಯಲ್ಲಿ ಮಹಿಳೆಯರ ತೊಂದರೆಗಳಿಗೆ ಸ್ಪಂದಿಸುವವರಿದ್ದಾರೆ.
- ನಗರದಾದ್ಯಂತ ಒಟ್ಟು 60 ವುಮೆನ್ ಔಟ್ ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದ್ದು, ದಿನದ 24 ಗಂಟೆ ಕಾರ್ಯಯನಿರ್ವಹಿಸಲು ಪಾಳೆಯ ವ್ಯವಸ್ಥೆಯಲ್ಲಿ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಶಾಲೆ ಕಾಲೇಜು, ಬಸ್‌ಸ್ಟಾಂಡ್, ರೈಲ್ವೆನಿಲ್ದಾಣ, ಪಾರ್ಕ್, ಮಾಲ್ ಇತ್ಯಾದಿ ಸೂಕ್ಷ್ಮ ಸ್ಥಳಗಳಲ್ಲಿ ಸಾರ್ವಜನಿಕರಿಗೆ ಕಾಣುವ ರೀತಿಯಲ್ಲಿ ಸದರಿ ಔಟ್ ಪೋಸ್ಟ್‌ಗಳನ್ನು ಅಳವಡಿಸುವ ಮೂಲಕ ಸಾರ್ವಜನಿಕವಾಗಿ ಮಹಿಳೆಯರಿಗೆ ಭದ್ರತೆ ಒದಗಿಸುವ ವಿಶ್ವಾಸವನ್ನು ಮೂಡಿಸುವ ಜೊತೆಗೆ ದೌರ್ಜನ್ಯಕ್ಕೊಳಗಾದ ಮಹಿಳೆ/ ಮಕ್ಕಳಿಗೆ ಕೂಡಲೇ ಪೊಲೀಸ್ ನೆರವನ್ನು ಒದಗಿಸುವ ಉದ್ದೇಶವನ್ನು ಗುರಿಯಾಗಿಟ್ಟುಕೊಳ್ಳಲಾಗಿದೆ.
- ಬೆಂಗಳೂರು ನಗರದಾದ್ಯಂತ ಆಯ್ದ 50 ಸ್ಥಳಗಳಲ್ಲಿ ಸೇಫ್ಟಿ

<table>
<tr>
<td></td>
<td></td>
<td>ಐಲಾಂಡ್‌ಗಳನ್ನು ಸ್ಥಾಪಿಸಲಾಗಿದೆ<br>
• ಫೊರೆನ್ಸಿಕ್ ವಾಹನಗಳನ್ನು ಖರೀದಿಸಲಾಗಿದ್ದು, ಅಪರಾಧ ಕೃತ್ಯ ನಡೆದ ಸ್ಥಳಗಳಿಗೆ ತಜ್ಞರೊಂದಿಗೆ ಕೂಡಲೇ ತಲುಪಿ ಸಾಕ್ಷ್ಯ ಸಂಗ್ರಹಣೆ ಮಾಡಿ ತಜ್ಞರ ಅಭಿಪ್ರಾಯ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ತಲುಪಿಸಲು ಸಹಕಾರಿಯಾಗುತ್ತದೆ.<br>
• ಲಿಂಗಾಧಾರಿತ ಹಿಂಸಾಚಾರದ ಕುರಿತು ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.</td>
</tr>
<tr>
<td>ಇ</td>
<td>ಕಳೆದ 5 ವರ್ಷಗಳಿಂದ ನಡೆದಿರುವ ದೌರ್ಜನ್ಯ ಪ್ರಕರಣಗಳಲ್ಲಿ ಎಷ್ಟು ಅಪರಾಧಿಗೆ ಶಿಕ್ಷೆಯಾಗಿದೆ; ಹಾಗೂ ತಪ್ಪಿಸಿಕೊಂಡಿರುವ ಅಪರಾಧಿಗಳ ಸಂಖ್ಯೆ ಎಷ್ಟು;</td>
<td>ರಾಜ್ಯದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ (ಲೈಂಗಿಕ ಕಿರುಕುಳ, ಅತ್ಯಾಚಾರ, ವರದಕ್ಷಿಣೆ ಕಿರುಕುಳ ಸಾವು ಹಾಗೂ ಫೋಕ್ಸೋ) ಪ್ರಕರಣಗಳ ಪೈಕಿ ಶಿಕ್ಷೆಯಾದ ಮತ್ತು ಖುಲಾಸೆ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿದೆ:-
<table>
<tr><th>ಕ್ರ ಸಂ</th><th>ವರ್ಷ</th><th>ದೌರ್ಜನ್ಯ ಪ್ರಕರಣಗಳ ಸಂಖ್ಯೆ</th><th>ಶಿಕ್ಷೆಯಾದವರ ಸಂಖ್ಯೆ</th><th>ಖುಲಾಸೆಯ ಪ್ರಕರಣಗಳ ಸಂಖ್ಯೆ</th></tr>
<tr><td>1</td><td>2020</td><td>7367</td><td>222</td><td>2871</td></tr>
<tr><td>2</td><td>2021</td><td>8514</td><td>249</td><td>2909</td></tr>
<tr><td>3</td><td>2022</td><td>9765</td><td>192</td><td>2434</td></tr>
<tr><td>4</td><td>2023</td><td>11149</td><td>111</td><td>1555</td></tr>
<tr><td>5</td><td>2024</td><td>11193</td><td>22</td><td>349</td></tr>
<tr><td>6</td><td>2025</td><td>1536</td><td>0</td><td>0</td></tr>
</table></td>
</tr>
<tr>
<td>ಈ</td>
<td>ಕಳೆದ 5 ವರ್ಷಗಳ ಅವಧಿಯಲ್ಲಿ ನಡೆದಿರುವ ವೇಶ್ಯಾವಾಟಿಕೆ ಪ್ರಕರಣಗಳ ಸಂಖ್ಯೆ ಎಷ್ಟು; ಈ ದಂಧೆಯಲ್ಲಿ ನಿರತರಾದವರಲ್ಲಿ ಇದುವರೆಗೂ ಎಷ್ಟು ಜನರನ್ನು ಬಂಧಿಸಲಾಗಿದೆ; ಇದರಲ್ಲಿ ನಮ್ಮ ರಾಜ್ಯದವರೆಷ್ಟು; ಹೊರ ರಾಜ್ಯದವರೆಷ್ಟು? (ಅಂಕಿ – ಅಂಶಗಳನ್ನು ಒದಗಿಸುವುದು)</td>
<td>ವೇಶ್ಯಾವಾಟಿಕೆ ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಹಾಗೂ ಬಂಧಿಸಿರುವವರ ಸಂಖ್ಯೆ ಈ ಕೆಳಕಂಡಂತಿದೆ:-
<table>
<tr><th>ಕ್ರ ಸಂ</th><th>ವರ್ಷ</th><th>ವೇಶ್ಯಾವಾಟಿಕೆ ಪ್ರಕರಣಗಳ ಸಂಖ್ಯೆ</th><th>ವೇಶ್ಯಾವಾಟಿಕೆ ಯಲ್ಲಿ ಬಂಧಿಸಿದವರ ಸಂಖ್ಯೆ</th><th>ನಮ್ಮ ರಾಜ್ಯದವರು</th><th>ಹೊರ ರಾಜ್ಯದವರು</th></tr>
<tr><td>1</td><td>2020</td><td>193</td><td>381</td><td>336</td><td>27</td></tr>
<tr><td>2</td><td>2021</td><td>270</td><td>468</td><td>466</td><td>42</td></tr>
<tr><td>3</td><td>2022</td><td>245</td><td>458</td><td>420</td><td>49</td></tr>
<tr><td>4</td><td>2023</td><td>401</td><td>575</td><td>505</td><td>69</td></tr>
<tr><td>5</td><td>2024</td><td>299</td><td>465</td><td>411</td><td>37</td></tr>
<tr><td>6</td><td>2025</td><td>50</td><td>65</td><td>59</td><td>3</td></tr>
</table></td>
</tr>
</table>

ಸಂಖ್ಯೆ: ಹೆಚ್‌ಡಿ 6 ಎಸ್‌ಡಿಎನ್ 2025

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು